Mr. SPEAKER.—I shall now put the motion to vote of the House. The question is:

"Having taken into account the acute scarcity conditions in 17 out of the 19 Districts of the State and the efforts made so far to provide relief, the House resolves that in view of the grave deterioration of the conditions, the scale of relief operations has to be stepped up very considerably and quickly. The scope and nature of these operations have to be widened. The Central assistance of Rs. 2.5 crores made on the basis of the assessment of the situation in June 1968 is grossly inadequate to meet the greatly worsened position today. It further resolves that to meet even the minimum demands of the situation, Central assistance of Rs. 20 crores would be definitely required as distress conditions will not abate before the next monsoon *viz.*, June 1969. The Government of India may be approached in the matter.

The purposes for which these grants can be expended should include not only works which provide immediate relief and employment but also measures to provide permanent relief and insurance against appearance of distress as a result of failure of monsoons."

The motion was adopted.

Mr. SPEAKER.—The House will now rise and meet again at 4-15 P.M.

The House adjourned at Forty-five Minutes past Three of the Clock and re-assembled at Twenty-five Minutes past Four of the Clock.

[MR. DEPUTY SPEAKER in the Chair]

PRIVATE MEMBERS' BUSINESS

(i) LEAVE TO INTRODUCE THE MYSORE CO-OPERATIVE SOCIETIES (AMENDMENT) BILL, 1968

Sri K. H. PATIL.—Sir, I beg leave of this House to introduce the Mysore Co-operative Societies (Amendment) Bill, 1968.

Mr. DEPUTY SPEAKER.—Has the House its leave to the Member to introduce the Mysore Co-operative Societies (Amendment) Bill, 1968?

SOME HON. MEMBERS.—Yes.

Sri B. L. GOWDA (Deputy Minister for Co-operation).—Sir, I oppose.

4-30 P.M.

†ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಮಾನ್ಯ ಸಭಾಪತಿಗಳೇ, ಇವತ್ತಿನದಿವಸ ಮೈಸೂರು ಕೋಆಪರೇಟಿವ್ ಸೊಸೈಟಿ ತಿದ್ದುಪಡಿ ಮಸೂದೆಯನ್ನು ಈ ಸಭೆಯಲ್ಲಿ ಮಂಡಿಸುವುದಕ್ಕೆ ಈ ಸಭೆಯು ಪರವಾನಿಗೆ ಕೇಳಲು ನನಗೆ ಬಹಳ ಸಂತೋಷ ಆಗುತ್ತಿದ್ದರೆ ಇನ್ನೊಂದು ರೀತಿ ಯಿಂದ ದುಃಖವಾಗುತ್ತಿದೆ. ಏಕೆಂದರೆ, ಮೈಸೂರು ದೇಶದಲ್ಲಿ ಪ್ರಮುಖವಾಗಿ ಈ ಸರ್ಕಾರಿ ಕಾಯಿದೆಯ 29, 54, 57, ಮತ್ತು 121ನೇ ಕಲಮುಗಳಿಗೆ ಮಾತ್ರ ಈಗ ತಿದ್ದುಪಡಿಯನ್ನು ಸೂಚಿಸಿದ್ದೇನೆ. ಸರ್ಕಾರದಲ್ಲಿ ವಿಶೇಷಯುತವಾದ ದೃಷ್ಟಿಯಿಂದ ಆಲೋಚನೆ ಮಾಡಿ ಯಾವು ದಾದರೂ ರಚನಾತ್ಮಕವಾದ ಸಲಹೆಗಳು ನಮ್ಮಿಂದ ಬಂದಾಗ ಆ ಸಲಹೆಗಳನ್ನು ಸರ್ಕಾರದವರು ಒಪ್ಪಬಹುದು ಎಂಬುದಾಗಿ ನಾನು ಆಶೆಮಾಡಿದ್ದೆ. ಸರ್ಕಾರದ ದೃಷ್ಟಿಯಲ್ಲಿ ವಿರೋಧಪಕ್ಷದವರಿಂದ ಯಾವುದೇ ಬರಲಿ ನಾವು ರೊಟ್ಟಿ ಅಂದರೆ ಗಿಟ್ಟಿ ಎಂದು ಹೇಳಿ ಎಲ್ಲವನ್ನೂ ಬೇಡವೆಂದು ಹೇಳುತ್ತಾರೆ. ಆ ರೀತಿ ಮನೋಭಾವನೆ ಇವರಲ್ಲಿದೆಯೆಂದು ನೋಡಿ ನನಗೆ ಬಹಳ ದುಃಖವಾಗುತ್ತಿದೆ. ಏನೇ, ಇರಲಿ, ಇವತ್ತಿನ ದಿವಸ ನನ್ನ ಸ್ನೇಹಿತರಾದಂಥ ಮಾನ್ಯ ಶ್ರೀ ಬಿ. ಎಲ್. ಗೌಡ ಅವರು ವಿರೋಧ ಮಾಡುವ ದೃಷ್ಟಿಯಿಂದ ಈ ಸಭೆಯ ಎದುರಿಗೆ ನಿಂತಿರುವುದು ಬಹಳ ಹರ್ಷವನ್ನು ತಂದಿದೆ. ಏಕೆಂದರೆ ಅವರು ಸಹಕಾರ ಸಂಘಗಳಲ್ಲಿ ನುರಿತವರಾಗಿದ್ದರೂ ಈಗ ಸಹಕಾರ ಉಪನಿಬಂಧಕರಾಗಿ ಒಬ್ಬ ಸಹಕಾರಿ ಸದಸ್ಯರಿಂದ ಬರತಕ್ಕದ್ದನ್ನು ವಿರೋಧಿಸುವುದಕ್ಕೆ ಒಂದು ಯೋಗ್ಯತೆ ಪಡೆದಿದ್ದಾರೆ. ದುರ್ದೈವದಿಂದ ಅವರು ಇವತ್ತು ಮಂತ್ರಿಗಳ ಪದವಿ ಪಡೆದು ಸಹಕಾರದಲ್ಲಿರುವ ಸದ್ಗುಣಗಳನ್ನು ಮರೆತು ಅವನ್ನು ದೂರೀಕರಿಸಿ ಮಂತ್ರಿಗಳಾಗುವುದಕ್ಕೆ ಮಾರುಹೋಗಿದ್ದಾರೆ. ಅವರು ಈಗ ತಮ್ಮಲ್ಲಿದ್ದುದರಿಂದ ವಿರೋಧಿಸುತ್ತಿದ್ದಾರೆಂದು ನಾನು ಭಾವನೆ ಮಾಡುತ್ತೇನೆ. ನಾನು ಇವತ್ತಿನ ದಿವಸ 25ನೇ ಕಲಮ್ ಬಗ್ಗೆ ಪೊಟ್ಟಪೊದಲನೆಯದಾಗಿ ತಿದ್ದುಪಡಿಯನ್ನು ಸೂಚಿಸಿದ್ದೇನೆ. ಅದು ಈ ರೀತಿ ಇದೆ:

> "The State Government or any authority specified by the State Government in this behalf, shall notwithstanding anything contained in this Act or the rules or the bye-laws of the Co-operative Society, but subject to any notification or order, for the time being in force, issued or made under Section 54 or 1 1, have the right to nominate as its representatives not more than three persons."

ಈ ರೀತಿ ಇದ್ದರೂ ಸಹ ಸರ್ಕಾರದವರು ಇಂಟರ್‌ಪ್ರಿಟೇಷನ್ನನ್ನು ತಮಗೆ ಅನುಕೂಲವಾಗುವ ಹಾಗೆ ಮಾಡಿಕೊಂಡು ಡೆಮಾಕ್ರಸಿಯನ್ನೇ ಕೊಲೆ ಮಾಡುವ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದಾರೆ. ಒಂದು ಸಹಕಾರ ಸಂಘದಲ್ಲಿ 15 ಜನರು ಪ್ರಜಾಪ್ರಭುತ್ವದಲ್ಲಿ ವಿಶ್ವಾಸವುಳ್ಳವರು ಇದ್ದಾರೆ ಎಂದು ಹೇಳಿ ಈ ಮನೆಯ ಮುಂದೆ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದರೆ ನಮ್ಮ ಸಹಕಾರ ಮಂತ್ರಿಗಳು ಈ ಕಾಯಿದೆಯನ್ನು ಅಮಲಿನಲ್ಲಿ ತರುವಾಗ ಯಾವರೀತಿ ಆಶ್ವಾಸನೆಯನ್ನು ಕೊಟ್ಟರೋ ಅದರಂತೆ ನಡೆದುಕೊಂಡು ಬರಲಿಲ್ಲ 29ನೇ ಕಲಂನಲ್ಲಿ ಮತ್ತೊಂದು ಸಬ್‌ಕ್ಲಾಜಿ ದೊಳಗೆ ಮೂರು ಮಂದಿಗಿಂತ ಹೆಚ್ಚು ಜನರನ್ನು ನಾಮಕರಣ ಮಾಡಬಾರದು ಎಂದು ಇದೆ. ಈಗಿನ ಹಣಕಾಸಿನ ಸಚಿವರು ಸಹಕಾರಿ ಮಂತ್ರಿಗಳಾಗಿದ್ದಾಗ ಕಣ್ಣುಮುಚ್ಚಿಕೊಂಡು ಇದ್ದರೇ? ತದನಂತರ ದಿವಗಂತ ಮಾಜಿ ಶ್ರೀ ಮಾಲಿ ಮರಿಯಪ್ಪನವರು ಸಹಕಾರೀ ಸಚಿವರಾಗಿದ್ದಾಗ ಈ ರೀತಿ ನಾಮಕರಣಮಾಡುವುದು ಬೇಡ, ಸ್ವಯಂಪ್ರೇರಿತರಾಗಿ ಅವು ನಡೆಯಲಿ ಎಂದು ಹೇಳಿದ್ದರು. ಆ ಮಾತಿಗೆ ನಿಮ್ಮ ಅಭಿಪ್ರಾಯವೇನು ?

Sri K. PUTTASWAMY.—Even today we stand by it.

ಶ್ರೀ ಕೆ. ಎಚ್. ಪಾಟೀಲ್.—ಈ ತತ್ವವನ್ನು ಇವತ್ತಿಗೂ ನಡೆಸುವುದಕ್ಕಾಗುತ್ತದೆಂದು ಹೇಳುವುದು ಕಾರ್ಯದಲ್ಲಿ ಇಲ್ಲದಿದ್ದರೂ ಬಾಯಲ್ಲಾದರೂ ಹೇಳುವ ಹವ್ಯಾಸ ಇದೆ. ಆ ರೀತಿ ಹೇಳುವ ಅಭಿಪ್ರಾಯ ನಿಮ್ಮದಾಗಿದ್ದರೆ ನಾನು 29ನೇ ಕಲಂಗೆ ತಿದ್ದುಪಡಿಯನ್ನೇ ತರುತ್ತಿರಲಿಲ್ಲ. ಎರಡು ಪ್ರತಿನಿಧಿಗಳಿಗಿಂತ ಹೆಚ್ಚಿಗೆ ನಾಮಕರಣ ಮಾಡಿ ಎಂದು ಹೇಳುವ ಗೋಜಿಗೆ ಹೋಗುತ್ತಿರಲಿಲ್ಲ. ಆದ್ದರಿಂದ ನನ್ನ ತಿದ್ದುಪಡಿ ಬಹಳ ಸಾಧುವಾಗಿದೆ. ಅದನ್ನು ನನ್ನ ಸ್ನೇಹಿತರೆಲ್ಲರೂ ಒಪ್ಪುತ್ತಾರೆಂದು ನಾನು ನಂಬಿದ್ದೇನೆ. ನನ್ನ ಸ್ನೇಹಿತರಾದಂಥ ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಬಹಳ

ಅನುಭವವುಳ್ಳವರು. ಅವರು ನನಗೆ ಪ್ರಬಲವಾಗಿ ಬೆಂಬಲಿಸುತ್ತಾರೆಂದು ನಾನು ಭಾವಿಸುತ್ತೇನೆ. ಇವತ್ತಿನದಿವಸ ಸಹಕಾರಸಂಘಗಳು ಯಾವ ಆಧಾರದ ಮೇಲೆ ನಿಲ್ಲಬೇಕು, ಯಾವ ತತ್ವವನ್ನೊಳಗೊಂಡಿರಬೇಕು ಎಂಬುದನ್ನು ಯೋಚನೆಮಾಡಬೇಕು. ಯಾರೇ ಆಗಲೀ ಹಾನಿಮಾಡಿದ್ದರೆ ಅಂತಹ ವರನ್ನು ಘೋರ ಶಿಕ್ಷೆಗೆ ಗುರಿಮಾಡಬೇಕು. ಇವತ್ತಿನದಿವಸ ಸಹಕಾರ ಸಂಘಗಳಲ್ಲಿ ಸದಸ್ಯರು ಷೇರು ಹಾಕುತ್ತಾರೆ. ಅದಕ್ಕೆ ಅವರಿಗೆ ಸಾಲ ಕೊಡುತ್ತಾರೆ. ಆದರೆ ಇಲ್ಲಿ ರಾಜ್ಯದ ಹಿತದೃಷ್ಟಿಯಿಂದ ಸರಿಯಾಗಿ ಕೆಲಸವಾಗುತ್ತಿಲ್ಲ. ಅನೇಕ ಕಡೆಗಳಲ್ಲಿ ಕಾರ್ಯತಃ ಈ ಸಹಕಾರ ಚಳುವಳಿಯಲ್ಲಿ ಮಾಲೀಕರೀಗೆ ವಿಶೇಷವಾಗಿ ನಷ್ಟವಾಗುತ್ತಿದೆ. ಮುಂಬೈ ಪ್ರಾಂತದಲ್ಲಿ ಒಂದು ಸಾರಿ ಸಹಕಾರ ಚಳುವಳಿಯ ಅಂದೋಳನ ನಡೆಯಿತು. ಅದನ್ನು ನೋಡಿದರೆ ಇಲ್ಲಿರುವಂಥಾದ್ದನ್ನು ಸಹಕಾರವೆಂದು ಹೇಳಬೇಕೋ ಏನೋ ಗೊತ್ತಿಲ್ಲ. ನಾನು ಇವರ ತತ್ವವನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆಂದು ಹೇಳಿದಾಗ ಒನ್ ಫಾರ್ ಆಲ್ ಆಲ್ ಫಾರ್ ಒನ್ ಎಂದು ಹೇಳುವ ಹಾಗೆ ನಮ್ಮ ಕಾಂಗ್ರೆಸ್ ಸ್ನೇಹಿತರಾದ ಮಾನ್ಯ ಶ್ರೀ ನಾಗನಗೌಡರು, ಮಾನ್ಯ ಶ್ರೀ ಎಂ. ಆರ್. ಪಾಟೀಲ್ ಅವರು ಮತ್ತು ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಖಂಡಿತವಾಗಿ ಸರಿಯಾದ ತಿದ್ದುಪಡಿ ಮಾಡಿ ಇಡೀ ರಾಜ್ಯಕ್ಕೆ ಆಗತಕ್ಕಂಥ ಅನ್ಯಾಯವನ್ನು ತಪ್ಪಿಸಬೇಕು. ಏಕೆಂದರೆ ನೀವು ಇವತ್ತಿನದಿವಸ ಅಧಿಕಾರದಲ್ಲಿರುವವರು. ಇದು ಪ್ರಪಂಚದಲ್ಲಿ ಕೊನೆಯವರೆಗೂ ಇರುವಂಥಾದ್ದು. ನೀವು ಅಧಿಕಾರವನ್ನು ಗಳಿಸಿರತಕ್ಕಂತಹವರು. ನಾಳೆ ನಮಗೆ ನೀವು ಕೊಡುವ ಹಿಂಸೆಗಳನ್ನು ತಡೆಯುವುದಕ್ಕೆ ನೈತಿಕ ಬಲವನ್ನು ಪರಮಾತ್ಮ ಕೊಟ್ಟಿದ್ದಾನೆ.

Mr. DEPUTY SPEAKER.—A brief statement may be made.

Sri K. H. PATIL.—Sir, the history of the whole co-operative movement should be revealed here. I will try to cut-short. ಈ ಮಾತನ್ನು ಲಕ್ಷ್ಯದಲ್ಲಿಟ್ಟುಕೊಂಡು ನಿಮ್ಮ ಸಹಕಾರ ಸಂಘಗಳಲ್ಲಿ ಎಂತಹ ಪ್ರಮಾದವಾದಂಥ ಅನ್ಯಾಯವನ್ನು ನಿಷ್ಠೆಯಿಳ್ಳವರು ತಡೆಗಟ್ಟಲು ಯಾವ ಮನೋಭಾವನೆಯನ್ನು ತಾಳುತ್ತಾರೋ ಅದೇ ಮನೋವನೆಯನ್ನು ಈ ನನ್ನ ತಿದ್ದುಪಡಿಯನ್ನು ಒಪ್ಪುವಾಗಲೂ ತಾಳಬೇಕು. ಇದರಲ್ಲಿ ನಾನು ಇನ್ನೇನೂ ಹೆಚ್ಚಿಗೆ ತಿದ್ದುಪಡಿ ಮಾಡಲಿಲ್ಲ. ಇಬ್ಬರು ಅಧಿಕಾರಿಗಳನ್ನು ಅಲ್ಲಿ ಇಡುವುದು—ಈ ಒಂದೇ ಸಲಹೆಯನ್ನು ಮಾಡಿದ್ದೇನೆ. ಸಹಕಾರ ಸಂಘಗಳ ಕಾಯಿದೆಯಲ್ಲಿ 53, 54, ಮತ್ತು 55 ಕಲಂಗಳಿಗೆ ಸ್ಪೇಟ್ ಏಡ್ ಹೊಂದಿಸಿದ್ದಾರೆ. ಅದಕ್ಕೆ ಡೆಫಿನಿಷನ್ ಕೊಟ್ಟಿದ್ದಾರೆ. ನನ್ನ ಎದುರಿಗೆ ಕುಳಿತಿರತಕ್ಕ ಮಾನ್ಯ ಶ್ರೀ ಎಂ. ಆರ್. ಪಾಟೀಲ್ ಅವರು ಅದನ್ನು ಅಪ್ರೋಪ್ ಮಾಡಿದ್ದಾರೆ. ದಿವಂಗತ ಮಾಜಿ ಸಹಕಾರ ಸಚಿವ ಮಾನ್ಯ ಶ್ರೀ ಮಾಲಿ ಮರಿಯಪ್ಪನವರು ಈ ಕಾಯಿದೆ ಪಾಸ್ ಆಗುವಾಗ ಒಂದು ಅಷ್ಯೂರೆನ್ಸ್ ಕೊಟ್ಟಿದ್ದಾರೆ. ಅದೇನೆಂದರೆ ಈ ಕಾಯಿದೆಯನ್ನು ಯಾವ ರೀತಿಯಲ್ಲಿಯೂ ದುರುಪಯೋಗ ಮಾಡುವುದಿಲ್ಲ ಎಂದು. ಸ್ಪೇಟ್ ಏಡ್ ಕೊಟ್ಟಿರುವ ಸಹಕಾರ ಸಂಸ್ಥೆಗಳಿಗೆ ಈ ಕಾಯಿದೆಯ ಕೆಲವು ಕಲಮುಗಳನ್ನು ಯಾವ ರೀತಿ ಅನ್ವಯಿಸುತ್ತಾರೆಂದು ಅಶ್ವಾವನೆ ಕೊಟ್ಟಿದ್ದರು. ಅದನ್ನು ಈವೊತ್ತಿನ ದಿವಸ ಯಾವ ರೀತಿ ನಡೆಸುತ್ತಾರೆಂಬುದನ್ನು ನೋಡಬೇಕು. ಈಗಲೂ ಆಶ್ವಾಸನೆಯನ್ನು ಕೊಡುತ್ತಿದ್ದಾರೆ. ಅಂದಮೇಲೆ ಇದನ್ನು ಅಷ್ಯೂರೆನ್ಸ್ ರಾಜ್ಯವೆಂದು ಕರೆಯಬೇಕೋ ಅಥವಾ ಆಡಿದ್ದನ್ನು ಮಾಡದಂಥ ಸರ್ಕಾರ ಎಂದು ಕರೆಯಬೇಕೋ ಎಂಬುದನ್ನು ಯೋಚನೆಮಾಡಬೇಕು. ಒಂದು ಮಾತನ್ನು ಹೇಳುತ್ತೇನೆ. ಯಾವ ದೃಷ್ಟಿಯಿಂದ ಸರ್ಕಾರದವರು ಸೆಕ್ಷನ್ 54ನ್ನು ಮಾಡಿದ್ದಾರೋ ಅದರ ಪ್ರಕಾರ ಕೇಂದ್ರ ಸರ್ಕಾರದವರು ಕೊಡುವ ಹಣವನ್ನು ನೀವು ಖರ್ಚುಮಾಡಬೇಕಾಗಿದೆ. ಬೇರೆ ಬೇರೆ ಕೆಲಸಗಳಿಗೆ ಹಣವನ್ನು ವಿತರಣೆಮಾಡುವಾಗ ಈ ಸಭೆಯ ಸೆನ್ಸ್ ತೆಗೆದುಕೊಂಡಿರುತ್ತಾರೆ. ಕೇಂದ್ರ ಸರ್ಕಾರದವರಿಂದ ಹಣವನ್ನು ತೆಗೆದುಕೊಂಡಿರುವ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಇವರು ಕಮಿಟಿಗೆ ಅರಿಸಿರತಕ್ಕ ಜನರ ಒಂದು ಹಕ್ಕನ್ನು ಕಸಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ನಾನು ಹೇಳುತ್ತೇನೆ. ಆ ರೀತಿ ಮಾಡತಕ್ಕದ್ದು ಸರಿಯಿಲ್ಲ. ನಾಳೆ ಒಂದು ವೇಳೆ ಕೇಂದ್ರದಲ್ಲಿ ಕಾಂಗ್ರೇಸ್ಯೇತರ ಸರ್ಕಾರ ಬಂದರೆ ಯಾವರೀತಿಯಾಗುತ್ತದೆ ಎಂಬುದನ್ನು ಯೋಚನೆ ಮಾಡಿ. ಈಗ ರಾಜ್ಯ ಸರ್ಕಾರದವರು ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನವರಮೇಲೆ ಕಂಟ್ರೋಲ್ ಬಿಟ್ಟರೆ ಸಹಕಾರ ಸಂಘಗಳಲ್ಲಿ ಹಣದ ವಿತರಣೆ ಸರಿಯಾಗಿ ಆಗುವುದಕ್ಕೆ ಏನೂ ಅಡ್ಡಿ ಬರುವುದಿಲ್ಲ. 5 ಲಕ್ಷ ರೂಪಾಯಿಗಳಿಗಿಂತ ಕಡಿಮೆ ಹಣವನ್ನು ತೊಡಿಗಿಸುವ ಸಹಕಾರ ಸಂಘಗಳಮೇಲೆ ಎಲ್ಲಾ ರೀತಿಯಲ್ಲಿಯೂ ಸರ್ಕಾರದ ಕಂಟ್ರೋಲ್ ಇದ್ದೇ ಇದೆ. 5 ಲಕ್ಷ ರೂಪಾಯಿಗಳಿಗಿಂತ ಜಾಸ್ತಿ ಹಣವನ್ನು ತೊಡಗಿಸುವಂತಹ ಸಹಕಾರ ಸಂಘಗಳ ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನವರ ಮೇಲೂ ಸರ್ಕಾರದವರು ಕಂಟ್ರೋಲ್ ತೆಗೆದುಕೊಳ್ಳುವುದರಿಂದ ಆ ಸಹಕಾರ ಸಂಘಗಳ ಮ್ಯಾನೇಜ್‌ಮೆಂಟಿನವರಮೇಲೆ

(SRI K. H. PATIL)

ಸರ್ಕಾರದವರು ಒತ್ತಾಯವನ್ನು ಹೇರಿ ಪಬ್ಲಿಕ್ ಇಂಟರೆಸ್ಟಿಗೋಸ್ಕರ ಎಂದು ನೆಪ ಹೇಳಿ ಯಾವುದಾದರೂ ಬೇರೆ ಕೆಲಸಗಳಿಗೆ ತಮ್ಮ ಮನಸ್ಸಿಗೆ ಬಂದಷ್ಟು ಹಣವನ್ನು ತಮ್ಮ ಹಿಂಬಾಲಕರಿಗೆ ಕೊಡಿಸಬಹುದು. ಅದು ಸರಿಯಲ್ಲ. ಯಾವುದೇ ಒತ್ತಾಯದಿಂದ ಸಹಕಾರ ಸಂಘಗಳಿಗೆ ಹಣವನ್ನು ಕೊಡಬಾರದು ಎಂದು ರಿಜರ್ವ್ ಬ್ಯಾಂಕಿನವರ ಸರ್ಕ್ಯುಲರ್ ಇದೆ. ಈ ದೃಷ್ಟಿಯಿಂದ ಈಗ ನಾನು ತಂದಿರತಕ್ಕ ತಿದ್ದುಪಡಿ ಏನಿದೆ ಇದು ಸಾಧುವಾಗಿದೆ. ಆದ ಕಾರಣ ನಾನು ಹೇಳುವುದೇನೆಂದರೆ ಮಾನ್ಯ ಪಾರ್ಲಿಮೆಂಟರಿ ಶಾಖೆಯ ಸಚಿವರು ದೊಡ್ಡವರಾಗಿರುವುದರಿಂದ ನಾನು ಅವರಿಗೆ ತಲೆ ಬಾಗಿಸುತ್ತೇನೆ. ತಾವು ಇದು ಯಾವರೀತಿ ಇದೆಯೆಂಬುದನ್ನು ಸ್ವಲ್ಪ ವಿಂಗಡಿಸಿ ನೋಡಿ. ಈ ಬಗ್ಗೆ ನಾವು ಏನು ಹೇಳಿದರೂ ಕೂಡ ಅದು ವಿರೋಧಪಕ್ಷದವರ ವಾಣಿಯಾಗುತ್ತದೆ. ಆದ್ದರಿಂದ ಶ್ರೀಮಾನ್ ಜತ್ತಿಯವರು ಮತ್ತು ಶ್ರೀ ದೇವರಾಜ ಅರಸ್ ಅವರೂ ಸರ್ಕಾರಕ್ಕೆ ಸರಿಯಾದ ಮಾರ್ಗದರ್ಶನ ನೀಡುವುದಕ್ಕೆ ಅವಕಾಶ ಇದೆ. ಇಪ್ಪೊತ್ತು ಕಾಂಗ್ರೆಸ್ ಸರ್ಕಾರದಲ್ಲಿ ಅನೇಕ ಜನ ನಿಷ್ಪಕ್ಷಪಾತಿಗಳು, ವಿವೇಕಶಾಲಿಗಳು ಇದ್ದಾರೆ. ಅವರೂ ಸಹ ಇದರ ಬಗ್ಗೆ ಯೋಚನೆ ಮಾಡಲಿ. ಇದು ಪಕ್ಷದ ವಿಷಯವಲ್ಲ. ಸಹಕಾರಿ ಚಳುವಳಿಯನ್ನು ರಾಜಕೀಯ ಚಳುವಳಿಯಾಗಿ ಉಪಯೋಗ ಮಾಡುತ್ತಿರುವುದು ನಾಚಿಕೆಗೇಡಿನ ಪ್ರಸಂಗ. ಸರ್ಕಾರದವರೇ ಸಹಕಾರ ಚಳುವಳಿಯನ್ನು ಮುರಿದಂತಾಗುತ್ತವೆ. ಆದ್ದರಿಂದ ನೀತಿಯುತವಾದ ಮಟ್ಟದಲ್ಲಿ, ಉಚ್ಚ ಮಟ್ಟದಲ್ಲಿ ಪರಿಪಾಲನೆ ಮಾಡಬೇಕೆಂದು ಸರ್ಕಾರದವರು ಹಾಕಿಕೊಂಡಿರುವ ಸಹಕಾರಿ ತತ್ವ, ಸಹಕಾರಿ ಚಳುವಳಿ ಏನಿದೆ ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಸರ್ಕಾರದವರು ಮನಃಪೂರ್ವಕವಾಗಿ ಪ್ರಯತ್ನ ಮಾಡಬೇಕು. ಸೆಕ್ಷನ್ 54ರ ಪ್ರಕಾರ ಯಾವ ದೃಷ್ಟಿಯಿಂದ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಹಣವನ್ನು ಕೊಟ್ಟಿದ್ದಾರೆಯೋ ಅದರ ಪ್ರಕಾರ ಆ ಹಣವನ್ನು ಖರ್ಚು ಮಾಡಬೇಕು. ಹಾಗೆ ಮಾಡುವುದಾದರೆ ಅದರಿಂದ ದೇಶಕ್ಕೆ ಕಲ್ಯಾಣವಾಗುತ್ತದೆ. ಬಾಯಿಬಡುಕರಿಗೆ ಲಾಭಬಡುಕರಿಗೆ ಈ ಸಹಕಾರ ಸಂಸ್ಥೆಗಳು ಅಲ್ಲ. ಸರ್ಕಾರದವರು ಆ ಜನರ ಹಿತಚಿಂತನೆಯನ್ನು ಮಾಡುವುದಕ್ಕೆ ಹೋದರೆ ದೇಶಕ್ಕೆ ಕಲ್ಯಾಣವಾಗುವುದಿಲ್ಲ. ಇದರ ಉದ್ದೇಶವನ್ನು ಮರೆತು ಸರ್ಕಾರದವರು ಹದ್ದು ಮೀರಿ ನಡೆಯುವುದಕ್ಕೆ ಹೊರಟಿದ್ದಾರೆ. ಇದು ಸರಿಯಲ್ಲ. ಈಗ ನಾನು ತಂದಿರತಕ್ಕ ತಿದ್ದುಪಡಿ ಸೆಕ್ಷನ್‌ನಲ್ಲಿರತಕ್ಕ ಕೆಲವೊಂದು ಶಬ್ದಗಳು ನಿಮ್ಮ ಕೆಲಸಕಾರ್ಯಗಳಿಗೆ ಅಡ್ಡಿ ಬರುತ್ತದೆಂದು ನೀವು ತಿಳಿದುಕೊಂಡಿರಬಹುದು. ನೀವು ಈ ದಿವಸ ಇರುವುದು ಅಧಿಕಾರದ ಗುಂಗಿನಲ್ಲಿ. ಆದರೆ ಇದು ಶಾಸ್ವತವಲ್ಲ. ನಿಮಗೆ ಬಹು ಸಂಖ್ಯಾತರ ಬೆಂಬಲವಿದೆ ನಾವು ಏನು ಬೇಕಾದರೂ ಮಾಡಬಹುದು ಎಂದು ನೀವು ತಿಳಿದುಕೊಂಡಿದ್ದರೆ ಅದು ಸರಿಯಲ್ಲ. ಸಹಕಾರ ಸಂಘಗಳಲ್ಲಿ ಬೇರೆ ಬೇರೆ ಕೆಲಸಗಳಿಗೆ ಹಣವನ್ನು ವಿತರಣೆ ಮಾಡಬಾರದು, ಇದರ ಬಗ್ಗೆ ಒಂದು ನಿಯಂತ್ರಣ ಇರಬೇಕು ಎನ್ನುವ ದೃಷ್ಟಿಯಿಂದ ನಾನು ಈ ತಿದ್ದುಪಡಿಯನ್ನು ತಂದಿದ್ದೇನೆ. 5 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಸರ್ಕಾರದವರು ತೊಡಗಿಸುವ ಸಹಕಾರ ಸಂಸ್ಥೆಗಳ ಬಗ್ಗೆ ಕಂಟ್ರೋಲನ್ನು ಹೊಂದುವ ವಿಚಾರದಲ್ಲಿ ಮ್ಯಾನೇಜ್‌ಮೆಂಟನವರನ್ನು ಬಿಟ್ಟು ಉಳಿದ ಕಂಟ್ರೋಲನ್ನು ಪಡೆಯಬಹುದು. ಇದರಿಂದ ಅಂಥಾ ತೊಂದರೆಯೇನೂ ಆಗುವುದಿಲ್ಲ. ಇದನ್ನು ಸರ್ಕಾರದವರು ಒಪ್ಪಿಕೊಳ್ಳಬಹುದು. ಇಂತಿಂಥಾ ನಿಯಂತ್ರಣಗಳು ನಿಮಗೆ ಪೀಸಲಾಗಿರಬೇಕೆಂದು ಸೆಕ್ಷನ್ 30ರಲ್ಲಿ ಬೇರೆ ಹೇಳಿದ್ದೀರಿ. ಈ ಕಲಮ್ ಅನ್ನು ಏತಕ್ಕೆ ಇಟ್ಟಿದ್ದೀರಿ ? ಸಹಕಾರ ಸಂಘಗಳಲ್ಲಿ ಏನಾದರೂ ಮಿಸ್ ಅಪ್ರೊಪ್ರಿಯೇಷನ್ ಆದಾಗ, ಮಿಸ್ ಮ್ಯಾನೇಜ್‌ಮೆಂಟ್ ಆದಾಗ ಅದನ್ನು ನೂಪರ್‌ಸೀಡ್ ಮಾಡುವುದಕ್ಕೆ ಈ 30ನೇ ಸೆಕ್ಷನ್‌ನಲ್ಲಿ ಅಧಿಕಾರವನ್ನು ಇಟ್ಟುಕೊಂಡಿದ್ದೀರಿ. ಹೀಗಿರುವಾಗ ಮತ್ತೊಂದು ಸೆಕ್ಷನ್ ಪ್ರಕಾರ ಇನ್ನೊಂದು ಅಧಿಕಾರವನ್ನು ಏತಕ್ಕೆ ಇಟ್ಟುಕೊಳ್ಳುವುದಕ್ಕೆ ನೀವು ಪ್ರಯತ್ನ ಮಾಡುತ್ತೀರಿ ? ಇದು ಸರಿಯಲ್ಲ. ಈಗ ಸರ್ಕಾರದವರು ಅನೇಕ ಡಿಸ್ಟ್ರಿಕ್ಟ್ ಕೋ ಆಪರೇಟೀವ್ ಬ್ಯಾಂಕುಗಳನ್ನು ಮಾಡಿದ್ದಾರೆ. ಇದನ್ನು ಮಾಡಿರುವುದು ತಪ್ಪು ಎಂದು ನಾನು ಹೇಳುವುದಿಲ್ಲ. ಈ ಸಂಸ್ಥೆಗಳಲ್ಲಿ ಡೈರೆಕ್ಟರುಗಳು ಮತ್ತು ಚೇರ್ಮನ್‌ಗಳವರ ಕೈವಾಡದಿಂದ ಕೆಲವು ಸಂದರ್ಭಗಳಲ್ಲಿ ಅನ್ಯಾಯಗಳಾಗುತ್ತವೆ. ಆದ್ದರಿಂದ ಅದನ್ನು ತಪ್ಪಿಸುವ ದೃಷ್ಟಿಯಿಂದ ನಾನು ಇಲ್ಲಿ ಒಂದು ತಿದ್ದುಪಡಿಯನ್ನು ಸೂಚಿಸಿದ್ದೇನೆ. ಅದು ಈ ರೀತಿ ಇದೆ :

> "Provided that such notification shall not be published unless reasonable opportunity is given to the Society to show cause as to why intended action should not be taken in the interest of the State aid involved in the Society."

ಎಂದು ಇವೆ. ಇದನ್ನು ನಾನು ಏತಕ್ಕೆ ತಂದಿದ್ದೇನೆ ಎಂದರೆ ಸಹಕಾರ ಚಳುವಳಿಯನ್ನು ಭದ್ರವಾದ ಬುನಾದಿಯಮೇಲೆ ಹಾಕಬೇಕಾಗುತ್ತದೆ. ನಾಳೆ ದಿವಸ ಯಾವುದೇ ಸರ್ಕಾರ ಬಂದರೂ ಕೂಡ ಹಸ್ತಕ್ಷೇಪ ಮಾಡಬಾರದು. ಈ ದೃಷ್ಟಿಯಿಂದ ಸರ್ಕಾರ ಇದನ್ನು ವಿಚಾರ ಮಾಡಬೇಕು. ಇದು ಪ್ರಗತಿಪರವಾದ ವಿಚಾರ ಎಂದು ನಾನು ಸಲಹೆ ಮಾಡುತ್ತಿದ್ದೇನೆ. ಈ ಒಂದು ವಿಷಯದಲ್ಲಿ ಸಹಕಾರ ಚಳುವಳಿಯನ್ನು ದೊಡ್ಡದಾಗಿ ಇವೊತ್ತು ಮಾಡಬೇಕೆಂದು ಸರ್ಕಾರದವರು ಇದ್ದರೂ ಇಂದು ಇರುವ ಸಹಕಾರ ಮಂತ್ರಿಗಳಿಂದ ಸಹಕಾರ ಕ್ಷೇತ್ರದಲ್ಲಿ ಯಾವ ಸಾಧನೆಯೂ ಆಗುವುದಿಲ್ಲ. ಸಹಕಾರ ಕ್ಷೇತ್ರದಲ್ಲಿ ಈ ಮಂತ್ರಿಗಳು ಇರುವುದರಿಂದ ಇಲ್ಲಿ ಯಾವ ಪ್ರಗತಿದಾಯಕವಾದ ಕೆಲಸಗಳೂ ನಡೆಯುವುದಕ್ಕಾಗುವುದಿಲ್ಲ. 1957ರೊಳಗೆ ಸಹಕಾರ ಕ್ಷೇತ್ರದಲ್ಲಿ ಕೋ ಆಪರೇಟೀವ್ ಯೂನಿಯನ್ ಎನ್ನುವ ಒಂದು ಸಂಸ್ಥೆಯನ್ನು ಮಾಡಿಕೊಂಡು ಅದಕ್ಕೆ ಬೇಕಾದಷ್ಟು ದುಡ್ಡು ಸರಕಾರದ ವತಿಯಿಂದಲೂ ಕೊಟ್ಟಿದ್ದಾರೆ. ಈ ಒಂದು ಯೂನಿಯನ್ನಿನವರು ವರ್ತಕರಂತೆ ಲಾಭ ಸಂಪಾದಿಸುವ ಒಂದು ಸಂಸ್ಥೆಯಾಗಿದೆ. ಇದಕ್ಕೆ ಲಕ್ಷಗಟ್ಟಲೆ ಹಣ ಕೊಟ್ಟಿರುವುದರಿಂದ ಇದು ಈಗ ಸುಮಾರು ಐದಾರು ಲಕ್ಷ ರೂಪಾಯಿಗಳಷ್ಟು ಲಾಭ ಸಂಪಾದನೆ ಮಾಡುವ ಸಂಸ್ಥೆಯಾಗಿದೆ. ಈ ಸಹಕಾರಿ ಯೂನಿಯನ್ನಿನ ಕೆಲಸಗಳು ಜನತೆಯ ಕೆಲಸಗಳು ಎಂದು ಸರಕಾರದವರು ಬೇಕಾದಷ್ಟು ಸಹಾಯವನ್ನು ಕೊಟ್ಟಿದ್ದರೂ ಇದರಿಂದ ಜನತೆಗೆ ಸರಿಯಾಗಿ ಕೆಲಸಗಳು ಆಗುತ್ತಿಲ್ಲ. ಇದಕ್ಕೆ ಬದಲು ಬೇರೆ ಯಾವುದಾದರೂ ಸಹಕಾರ ಸಂಘಕ್ಕೆ ವಂತಿಕೆಯಾಗಿ ಕೊಡಬಹುದು. ನಮ್ಮಲ್ಲಿ ಸುಮಾರು 18–20 ಸಾವಿರ ಸಂಘಗಳು ಇವೆ ಇವಕ್ಕೆ ರಾಜ್ಯ ಸರಕಾರ ಸುಮಾರು 18 ಲಕ್ಷದಷ್ಟು ಸಹಾಯ ಮಾಡಿದ್ದರೆ ಇವೇ ಚಲೋ ಆಗಿ ಕೆಲಸ ಮಾಡಬಹುದಾಗಿತ್ತು. ಈಗ ಯೂನಿಯನ್ನಿನ ಮೂಲಕ ಕೊಡುತ್ತಿರುವುದರಿಂದ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಾನು ಇಲ್ಲಿ ಸೆಕ್ಷನ್ 121ಕ್ಕೆ ಅಮೆಂಡುಮೆಂಟನ್ನು ತಂದಿದ್ದೇನೆ ಇದರಲ್ಲಿರುವ with such modifications ಎನ್ನುವುದನ್ನು ಡಿಲಿಟ್ ಮಾಡಬೇಕು ಎಂದು ಸೂಚಿಸುತ್ತೇನೆ. ಶ್ರೀಮಾನ್ ಪುಟ್ಟಸ್ವಾಮಿಯವರೂ ಕೂಡ ನಾನು ಈಗ ಹೇಳಿರುವ ಮಾತುಗಳಿಂದ ಇದನ್ನು ಬೆಂಬಲಿಸುತ್ತಾರೆ ಎಂದು ನಂಬುತ್ತೇನೆ. ಈ ಸೆಕ್ಷನನ್ನು ದುರುಪಯೋಗಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಸರಕಾರದವರು ಈ ಅಧಿಕಾರ ತಮ್ಮ ಕೈಯೊಳಗೆ ಇಟ್ಟುಕೊಳ್ಳುವುದು ಸಾಧುವಲ್ಲ. ಸ್ವಾಮಿ, ಇವೊತ್ತು ಸೆಂಟ್ರಲ್ ಗವರ್ನಮೆಂಟಿನವರಾಗಲೀ ಪ್ಲಾನಿಂಗ್ ಕಮಿಷನ್ನಿನವರಾಗಲೀ ದೇಶದಲ್ಲಿ ಸಹಕಾರ ಚಳುವಳಿ ಚೆನ್ನಾಗಿ ಬೆಳೆಯಬೇಕೆಂದು, ಸರಕಾರ ಜನರ ಸಂಪರ್ಕ ಪಡೆಯಬೇಕೆಂದು ಬೇಕಾದಷ್ಟು ಸಹಾಯ ಮಾಡುವಾಗ ಅದನ್ನು ಸದುಪಯೋಗಪಡಿಸಿಕೊಳ್ಳಬೇಕು. ಆದರೆ ಇಂದು ಆ ರೀತಿ ಸದುಪಯೋಗವಾಗದೆ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಲು ಅಡಚಣೆಗಳು ಉಂಟಾಗುತ್ತಿವೆ. ಇವೊತ್ತು ನಮ್ಮಲ್ಲಿರುವ ಆಪೆಕ್ಸ್ ಬ್ಯಾಂಕುಗಳಲ್ಲಿ ಚೆನ್ನಾಗಿ ವ್ಯವಹಾರಗಳು ಆಗುತ್ತಿದ್ದರೂ ಅಲ್ಲಿ ತಮ್ಮ ಪಕ್ಷದವರು ಬರಲಿಲ್ಲವಲ್ಲಾ ಎಂದು ಅದನ್ನು ಕುಂಠಿತ ಗೊಳಿಸುವುದು ಸರಿಯಲ್ಲ. ಬೇರೆ ಯಾವ ವಿರೋಧಪಕ್ಷದವರಿಂದ ಒಳ್ಳೆಯ ಕೆಲಸವಾಗುತ್ತಿದ್ದರೂ ಅದಕ್ಕೆ ಇಲ್ಲದ ಅಡಚಣೆಗಳನ್ನುಂಟುಮಾಡುವುದು ಸರಿಯಲ್ಲ. ಆಡಳಿತ ಪಕ್ಷಕ್ಕೆ ಇಷ್ಟು ವಿವೇಕ ಬರಲಿಲ್ಲವಲ್ಲ ಎಂದು ನನಗೆ ತುಂಬಾ ವ್ಯಸನವಾಗುತ್ತದೆ. ಯಾವುದೇ ಪಕ್ಷ ಇರಲಿ ಸಹಕಾರ ಕ್ಷೇತ್ರದಲ್ಲಿ ಯಾವ ಪಕ್ಷಗಳ ಗೊಂದಲವೂ ಇಲ್ಲದೆ ಪಕ್ಷಾತೀತವಾಗಿರಬೇಕು. ಇದನ್ನು ನಮ್ಮ ಸ್ನೇಹಿತರು ಕಾಂಗ್ರೆಸ್ ಪಕ್ಷದವರೇ ಆಗಲೀ ವಿರೋಧ ಪಕ್ಷದವರೇ ಆಗಲೀ ಅರಿಯಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ನಾನು ತಿಳಿದುಕೊಂಡಿರುವಂತೆ ಶ್ರೀಮಾನ್ ಪಾಟೀಲ್ ರವರು ಈಗ ಹೇಳಿದ ಮಾತುಗಳಿಗೆ ಯಾವ ವಿರೋಧವೂ ಇಲ್ಲ. ಈ ಸಭೆಯ ಮುಂದೆ ಈ ಬಿಲ್ಲನ್ನು ಇಡುವಾಗ ಮಾನ್ಯ ಸದಸ್ಯರು ಹೇಳಿದ ವಾದಕ್ಕೆ ಯಾವ ಚ್ಯುತಿಯೂ ಬರುವುದಿಲ್ಲ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಯಾರೇ ಸದಸ್ಯರಾಗಲೀ, ಇಂತಹ ಸಾಮಾಜಿಕ ಸುಧಾರಣೆ ಅಥವಾ ಆರ್ಥಿಕ ಸುಧಾರಣೆಯನ್ನು ಮಾಡತಕ್ಕ ಕಾಲದಲ್ಲಿ, ಕಾನೂನಿಗೆ ತಿದ್ದುಪಡಿ ಮಾಡುವಾಗ ಮೂಲ ವಿಧೇಯಕ ಏನಿದೆ ಅದಕ್ಕೆ ಚ್ಯುತಿಬಾರದ ರೀತಿಯಲ್ಲಿ ತರಬೇಕು, ನಾನು ಯಾವ ರಾಜಕೀಯ ದೃಷ್ಟಿಯನ್ನು ಇಟ್ಟುಕೊಂಡು ಇಲ್ಲಿ ಮಾತಾಡುತ್ತಿದ್ದೇನೆ ಎನ್ನುವ ಭಾವನೆಯನ್ನು ಯಾರೂ ಮಾಡಿಕೊಳ್ಳಬಾರದು. ನಾನು ಈಗ ಮಾನ್ಯ ಸದಸ್ಯರು ಮಾಡಿದ ಭಾಷಣವನ್ನು ಒಂದೇ ದೃಷ್ಟಿಯಿಂದ ತದೇಕಚಿತ್ತದಿಂದ ಕೇಳಿದೆ. ವಿರೋಧ ಪಕ್ಷದ ಮಾನ್ಯ ಸದಸ್ಯರು ಇಲ್ಲಿ ಮಾತಾಡುತ್ತಿದ್ದರು ಎಂದು ನಾನು ನಿರಾಸಕ್ತಿ ವಹಿಸಿದರೆ ಅದು ಸರಿಯಾಗಿರುವುದಿಲ್ಲ. ಇದು ಇನ್ನೂ ಇಂಟ್ರೊಡಕ್ಷನ್ ಸ್ಟೇಜು ಆದುದರಿಂದ ನಾನು ಇದನ್ನು ವಿರೋಧಿಸುವುದಿಲ್ಲ. ಮುಂದೆ ಕನ್‌ಸಿಡರೇಷನ್ ಸ್ಟೇಜು ಬಂದಾಗ ಅದರಲ್ಲಿ ಏನಿದೆ ಎನ್ನುವುದು ಎಲ್ಲರಿಗೂ ಗೊತ್ತಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀಮಾನ್

(ಶ್ರೀ ಕೆ. ಪುಟ್ಟಸ್ವಾಮಿ)

ಪಾಟೀಲರವರು ಒಳ್ಳೇ ಮೇರ್ ರೈಲುಗಾಡಿ ಹೋಗುವಂತೆ ಸಹಕಾರದ ಬಗ್ಗೆ ಬಹಳವಾಗಿ ಮಾತನಾಡಿದರು. ನನಗೆ ಸ್ವಲ್ಪ ಇದರ ಹಿನ್ನೆಲೆ ಏನು ಎನ್ನುವುದು ಗೊತ್ತಿತ್ತು. ಆದಾಗ್ಯೂ ಅವರ ಅಭಿಪ್ರಾಯಗಳನ್ನೆಲ್ಲಾ ನಾನು ಸಂಗ್ರಹಿಸಬೇಕಾದರೆ ಸ್ವಲ್ಪ ಕಷ್ಟವೇ ಆಯಿತು. ಅವರು ಟ್ರಂಪ್ ಕಾರ್ಡಿನ ಹಿನ್ನೆಲೆಯನ್ನಿನ್ನೂ ನಾನು ಗಮನಿಸಿಲ್ಲ. ಸ್ವಲ್ಪ ಕಾಲದ ಹಿಂದೆ ಸಹಕಾರ ಖಾತೆಯನ್ನು ನಾನು ವಹಿಸಿಕೊಂಡಿದ್ದುದರಿಂದ ಬಹುಶಃ ಮಾನ್ಯ ಸದಸ್ಯರು ಇಲ್ಲಿ ಯಾವ ಯಾವ ಕಾರಣಗಳನ್ನು ಕೊಟ್ಟು ಸರ್ಕಾರದವರು ಆರ್ಡರು ಮಾಡಿದರು ಎಂದು ಹೇಳಿದರೋ ಅಂತಹ ಒಂದೆರಡು ಆರ್ಡರುಗಳನ್ನು ನಾನು ಇದ್ದಾಗಲೂ ಪಾಸು ಮಾಡಿದ್ದೇನೆ. ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿ ಇಂದು ದೇಶದಲ್ಲಿ ಲೋಕಸಭೆ, ವಿಧಾನ ಸಭೆ ಹಾಗೂ ವಿಧಾನ ಪರಿಷತ್ತುಗಳು ನಡೆಯುತ್ತಿವೆ. ಇದಕ್ಕೆ ಬೇಕಾದ ಕಾನೂನುಗಳೂ ಇವೆ. ಇದರಲ್ಲಿ ನಡವಳಿಕೆಗಳನ್ನೆಲ್ಲಾ ಪ್ರೊವೈಡು ಮಾಡಿದ್ದಾರೆ. ಇದನ್ನು ಈಗ ಯಾರೂ ವಿರೋಧ ಮಾಡುತ್ತಿಲ್ಲ. ಮುಂದೆ ಇದು ಕನ್‌ಸಿಡರೇಷ್ಟ್ ಸ್ಟೇಜಿಗೆ ಬಂದಾಗ ಇದರ ಬಗ್ಗೆ ದೀರ್ಘವಾದ ಚರ್ಚೆ ಮಾಡುತ್ತೇನೆ. ಇದು ಇಂಪ್ರೊವೈಡ್‌ಷ್ಟ್ ಸ್ಟೇಜು ಎನ್ನುವುದು ಎಲ್ಲ ಸದಸ್ಯರಿಗೂ ಗೊತ್ತು. ಇಲ್ಲಿ ಮಾನ್ಯ ಸದಸ್ಯರು ಸ್ಪಷ್ಟವಾಗಿ ಹೇಳುತ್ತಾ ಕಾನೂನನ್ನು ತಿದ್ದುಪಡಿ ಮಾಡಲು ವಿಧೇಯಕವನ್ನು ಇಲ್ಲಿ ತಂದಿದ್ದಾರೆ ಎನ್ನುವುದೂ ಗೊತ್ತಿದೆ. ನನಗೆ ಮುಂದೆ ಮಾತನಾಡಿದ ಶ್ರೀಮಾನ್ ಪಾಟೀಲರವರು ಬಹಳವಾಗಿ ಇದರ ಬಗ್ಗೆ ಏನು ಹೇಳುತ್ತಾರೆ ಎಂದು ನಾನು ಕಾದು ಅವರ ಭಾಷಣವನ್ನು ಪೂರ್ತಿ ಕೇಳಿದೆ, ಅವರ ಹತ್ತಿರ ಯಾವ ರೀತಿಯ ಟ್ರಂಪ್ ಕಾರ್ಡುಗಳು ಇವೆ ಎನ್ನುವುದನ್ನು ನೋಡೋಣ ಎಂದು. ಆದರೆ ನನಗೆ ಗೊತ್ತಿಲ್ಲದೇ ಇರುವ ಯಾವ ವಿಚಾರವನ್ನೂ ಅವರು ಇಲ್ಲಿ ಹೇಳಲಿಲ್ಲ. ಅಲ್ಲದೆ ಇಲ್ಲಿ ತಿದ್ದುಪಡಿಗಳನ್ನು ತರುವಾಗ ಕಾನೂನಿನ ನಿಯಮಗಳನ್ನು ಅನುಸರಿಸಿ ತಂದಿಲ್ಲ ಎನ್ನುವುದರಲ್ಲಿ ಒಂದು ರೀತಿ ಮಾಡಿದ್ದಾರೆ. ಮೂಲಭೂತವಾದ ತತ್ವವನ್ನು ನಾನೂ ಒಪ್ಪುತ್ತೇನೆ. ಸರ್ಕಾರ ತನ್ನ ಪಾಲಿನ ಹಣವನ್ನು ಕೊಡುವ ವೇಳೆಯಲ್ಲಿ ಇಲ್ಲಿ ನಡೆಯುವ ಎಲ್ಲ ವ್ಯವಹಾರಗಳು ಸರಿಯಾದ ರೀತಿಯಲ್ಲಿ ನಡೆಯುವುದಕ್ಕೆ ಇದರ ಕಂಟ್ರೋಲನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದೇ ಅಭಿಪ್ರಾಯವನ್ನು ಹಿಂದೆ ಸಹಕಾರ ಖಾತೆಯ ಮಂತ್ರಿಗಳಾಗಿದ್ದ ಶ್ರೀ ಮಾಲಿ ಮರಿಯಪ್ಪನವರೂ ಹೇಳಿದ್ದರು. ಅದರಂತೆ ಇಂದು ಅಂತಹ ಕಾನೂನೇ ಇಲ್ಲಿ ಬಂದಿದೆ. ಆಗಿದ್ದ ಸಹಾಯವನ್ನು ಎರಡು ಲಕ್ಷದಿಂದ ಐದು ಲಕ್ಷದವರೆಗೆ ಹೆಚ್ಚು ಮಾಡಲಾಗಿದೆ, ಮತ್ತು ಇದಕ್ಕಾಗಿ ಸೆಕ್ಷನ್ 29(3)ರನ್ನು ತಿದ್ದುಪಡಿ ಮಾಡಿ ತರಲಾಗಿದೆ. ಸೆಕ್ಷನ್ 29ರಲ್ಲಿರುವ ಒಳ ಸೆಕ್ಷನ್ (3)ನ್ನು ಬದಲಾವಣೆ ಮಾಡುವುದಕ್ಕೆ ಅಧಿಕಾರವಿದೆ. ಮತ್ತೆ ಸೆಕ್ಷನ್ 54ರ ಪ್ರಕಾರ ಹೆಚ್ಚು ಹಣ ಕೊಡುವಾಗ ಇದರ ಕಂಟ್ರೋಲನ್ನು ತೆಗೆದುಕೊಳ್ಳಬೇಕೆಂದು ಸ್ಪಷ್ಟವಾಗಿ ಹೇಳಿದೆ :

> "May by notification in the official gazette take power to exercise such control over the conduct of business of such society as shall suffice in the opinion of the State Government to safeguard the interests of the State."

This is a justifiable matter. ಸರಕಾರ ಯಾವ ಸಮಯದಲ್ಲಿ ಅವರ ಡಿಸ್‌ಕ್ರಿಪನ್ ತಪ್ಪಾಗಿ ಎಕ್ಸರ್‌ಸೈಸು ಮಾಡುತ್ತಾರೋ ಆಗ ಅವರು ಹೈಕೋರ್ಟಿಗೆ ಹೋಗಲು ಅವಕಾಶ ಇದ್ದೇ ಇರುತ್ತದೆ. ನನಗೆ ತಿಳಿದಹಾಗೆ ಎರಡು ಮೂರು ಸಂದರ್ಭಗಳನ್ನು ಬಿಟ್ಟರೆ ಆ 54ನೆಯ ಸೆಕ್ಷನ್ ಪ್ರಕಾರ ಈ ಕಂಟ್ರೋಲ್ ಒಂದನ್ನು ತಪ್ಪಿಸಬೇಕು ಎಂಬ ಒಂದು ಸಂದರ್ಭ ವಿನಾ ಇನ್ನುಳಿದ ಎಲ್ಲಾ ಸಂದರ್ಭಗಳಲ್ಲಿಯೂ ಹೈಕೋರ್ಟಿಗೆ ರಿಟ್‌ಗಳನ್ನು ಹಾಕಿದ್ದಾರೆ. ಅಲ್ಲಿ ಹೈಕೋರ್ಟಿನವರು ನಾವಿಲ್ಲಿ ಮಾಡಿರತಕ್ಕದ್ದೇ ಸರಿ ಎಂಬುದಾಗಿ ತೀರ್ಮಾನ ಕೂಡ ಕೊಟ್ಟಿದ್ದಾರೆ. ನಾನು ಹಿಂದೆ ಈ ಅಧಿಕಾರವನ್ನು ಇಟ್ಟುಕೊಂಡಿದ್ದಾಗ ಕಂಪಳಿ ಸಕ್ಕರೆ ಕಾರ್ಖಾನೆಗೆ 16 ಜನರನ್ನು ನಾಮಕರಣ ಮಾಡಿದುದಾಗಿ ಜ್ಞಾಪಕವಿದೆ. ಇಲ್ಲಿ ಇವರು ಬೋರ್ಡ್ ಆಫ್ ಮ್ಯಾನೇಜ್‌ಮೆಂಟನ್ನು ಕೈಬಿಟ್ಟು, ಅಧ್ಯಕ್ಷರೊಬ್ಬರನ್ನು ನಾಮಕರಣದ ಮೇಲೆ ತೆಗೆದುಕೊಳ್ಳಬೇಕು ಎಂದು ಹೇಳುತಿದ್ದಾರೆ. ಆದರೆ ಅಲ್ಲಿಗೆ ಆ ಜನರಲ್ ಮ್ಯಾನೇಜರಾಗಲಿ, ಸ್ಟೋರ್ ಕೀಪರಾಗಲೀ ಮತ್ತು ಸೆಕ್ರೆಟರಿಗಳಾಗಲೀ ಎಲ್ಲರೂ ಬೇಕೇಬೇಕು. ಅಧಿಕಾರಿಗಳಿಗೆ ಈ ಅವಕಾಶವನ್ನು ಕೊಟ್ಟರೆ ನಾವು ಅವರ ಅಂಕೆಗೆ ಒಳಗಾಗಿ ಅವರ ಅಧಿಕಾರಕ್ಕೊಳಗಾಗಿ ಕೆಲಸಮಾಡಬೇಕಾದ ಪ್ರಸಂಗ ಬರುತ್ತದೆ, ಆದ್ದರಿಂದ ಆಡಳಿತವನ್ನು ಅಧಿಕಾರಿಗಳಿಗೆ ಕೊಡುವುದು ಬೇಡ ಎಂದು ಅವರು ಹೇಳುತ್ತಿದ್ದಾರೆ. ಇನ್ನು ಶಿಬ್ಬಂದಿ ವರ್ಗದಲ್ಲಿ ಬೇಕಾದರೆ ಸ್ವಲ್ಪ ಹೆಚ್ಚುಕಡಿಮೆ ಮಾಡಿಕೊಳ್ಳಬಹುದು ಎಂದು ಹೇಳಿದ್ದಾರೆ.

5-00 P.M

ಶ್ರೀ ಕೆ.ಎಚ್ ಪಾಟೀಲ್.—ತಪ್ಪಿತಸ್ಥರ ಬಗ್ಗೆ ನಕಾರದವರು ಸೆಕ್ಷನ್ 30ರ ಕೆಳಗೆ ಕ್ರಮ ಕೈಗೊಳ್ಳುವುದಕ್ಕೆ ಅವಕಾಶವಿದೆಯಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ನಮ್ಮ ಮೂಲ ವಿಧೇಯಕದಲ್ಲಿರತಕ್ಕ ತತ್ವಗಳನ್ನು ಮಾನ್ಯ ಸದಸ್ಯರು ಒಪ್ಪಿದ್ದಾರೆ. ಆದರೆ ಅವರು ಅಲ್ಲಲ್ಲೇ ಸ್ವಲ್ಪ ಬದಲಾವಣೆಗಳನ್ನು ಮಾಡಬೇಕು ಎಂದು ಕೇಳಿದ್ದಾರೆ. ನಮಗೆ ಅವರು ಹೇಳತಕ್ಕ 30ನೇ ಸೆಕ್ಷನ್ನನ್ನು ಬಿಟ್ಟರೆ ನಮಗಿನ್ನು ಬೇರೆ ಮಾರ್ಗ ಇಲ್ಲ. ಆದರೆ ಅಲ್ಲಿಯತನಕ ನಾವೇಕ ಕೈಕಟ್ಟಿ ಕುಳಿತುಕೊಳ್ಳಬೇಕು ? ಅದಕ್ಕಾಗಿ ನಾನು ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಆದರೆ ಮುಂದೆ ಇದಿನ್ನೂ ಪುಂಕಾನುಪುಂಕವಾಗಿ ಚರ್ಚೆಗೆ ಬಂದಾಗ ಮಾನ್ಯ ಸದಸ್ಯರು ಇನ್ನೂ ಎನೇನು ಟ್ರಂಪುಗಳನ್ನಿಟ್ಟಿದ್ದಾರೆಂಬುದನ್ನು ನೋಡೋಣ. ಆದರೆ ಅವರಲ್ಲ ಇಷ್ಟೇ ಟ್ರಂಪುಗಳಾದರೆ ಈ ತಿದ್ದುಪಡಿಯನ್ನು ಸಭೆಯವರು ಒಪ್ಪರಾರರು. ಆದರೆ ಈ ಇಂಟ್ರಡಕ್ಟರಿ ಸ್ಟೇಜಿನಲ್ಲಿ ನಾನು ಇದನ್ನು ವಿರೋಧಿಸುವುದಿಲ್ಲ.

Mr. DEPUTY SPEAKER.—Again I will put the motion of leave to introduce the Bill. I think the House gives leave to Sri K. H. Patil to introduce the Mysore Co-operative Societies (Amendment) Bill, 1968.

HON'BLE MEMBERS.—Yes.

Sri K. H. PATIL.—I introduce : The Mysore Co-operative Societies (Amendment) Bill, 1968.

Mr. DEPUTY SPEAKER.—The Mysore Co-operative Societies (Amendment) Bill, 1968, is introduced.

(ii) MOTION OF LEAVE TO INTRODUCE THE MYSORE LAND REVENUE (AMENDMENT) BILL, 1968

Sri H. N. NANJE GOWDA.—I beg leave of the House to introduce the Mysore Land Revenue (Amendment) Bill, 1968.

Mr. DEPUTY SPEAKER.—Does the House give leave to Sri H. N. Nanje Gowda to introduce the Mysore Land Revenue (Amendment) Bill, 1968 ?

HON'BLE MEMBERS.—Yes.

Sri H. N. NANJE GOWDA.—I introduce the Mysore Land Revenue (Amendment) Bill, 1968.

Mr. DEPUTY SPEAKER.—The Mysore Land Revenue (Amendment) Bill, 1968 is introduced.

(iii) RESOLUTION *re*: CONDUCTING ENQUIRY INTO SEVERAL ACTS OF EXCESSES BY POLICE

(Debate contd.)

Mr. DEPUTY SPEAKER.—Shri Amalorpavam to continue his speech on the resolution moved by Sri Krishnan.